**ಸಾಕ್ಷಿಗೆ ದಿನಾಂಕಃ 06.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ.VSN ವಕೀಲರಿಂದಃ**

1) ನಾನು ಖಾಸಗಿ ಪತ್ತೇದಾರನಾಗಿ ಕರ್ತವ್ಯ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ. ನನ್ನ ಹೇಳಿಕೆಗೆ ಸರಿಯಾಗಿ ನಮ್ಮ ವಕೀಲರು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಿದ್ಧಪಡಿಸಿದ್ದಾರೆ.

2) ಒಂದು **Compact Disc** ಹಾಜರುಪಡಿಸಿದ್ದು ಅದನ್ನು ನಿ.ಆರ್.**5** ಎಂದು ಗುರುತಿಸಿದೆ. ಸದರಿ ನಿ.ಆರ್.**5** ಎಂದು ಗುರುತು ಆಗಿರುವ **Compact Disc** ನಲ್ಲಿ ಇರುವ ವಿವರಗಳನ್ನು ಮತ್ತು ಮಾಹಿತಿಗಳನ್ನು ನಾನೇ ಕಲೆ ಹಾಕಿದ್ದೇನೆ.

3) ಈ **Compact Disc** ದಾಖಲೆಗೆ ಸಂಬಂಧಪಟ್ಟ ಹಾಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ **63(ಸಿ)** ಪ್ರಕಾರ ಒಂದು **certificate** ಅನ್ನು ನಾನೇ ನೀಡಿದ್ದೇನೆ. ಸದರಿ **certificate** ಅನ್ನು ನಿ.ಆರ್.**6** ಎಂದು ಗುರುತಿಸಿದೆ.

4) ನಿ.ಆರ್.**5** ಎಂದು ಗುರುತು ಆಗಿರುವ ಸಿ.ಡಿ.ಯ ಒಳಗಡೆ ಏನು ಏನು ಮಾಹಿತಿಗಳು ಮತ್ತು ಚಿತ್ರಗಳು ಮತ್ತು ಮಾತುಕಥೆಗಳು ಇವೆ ಎಂಬ ಎಲ್ಲಾ ವಿವರಗಳನ್ನು ಎಫ್.ಎಸ್.ಎಲ್ ಸಂಸ್ಥೆಯವರು ಕೇಳಿಸಿಕೊಂಡು ಮತ್ತು ನೋಡಿಕೊಂಡು ನಂತರ **Forensic Audio / Video Authentication report** ಎಂಬುದಾಗಿ ಒಂದು ದಾಖಲೆಯನ್ನು ಅಥವಾ ವರದಿಯನ್ನು ಮಾಡಿ ಕೊಟ್ಟಿದ್ದಾರೆ ಆ ದಾಖಲೆಯನ್ನು ಹಾಜರುಪಡಿಸಿದ್ದೇನೆ.

**ಪಾಟೀ ಸವಾಲು: ಕೋರಿಕೆಯ ಮುಂದೂಡಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.